147ನೇ ಅಧಿವೇಶನ
ನಿ-330
ಕ್ರ-45 – ರಂಜಿತ್ಟರ್

**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪಿ.ಆರ್. ರಮೇಶ್ ರವರು ನಿಯಮ 330 ರಡಿ ನೀಡಿರುವ ಸೂಚನೆಗೆ ಸಂಬಂಧಿಸಿದಂತೆ ಉತ್ತರ.**

* * * * * * * * * *

ವಿಷಯ:

ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ, ಸರ್ಕಾರ, ಬಿ.ಬಿ.ಎಂ.ಪಿ. ನಗರೋತ್ಥಾನ ಅನುದಾನ ಹಾಗೂ ಅನೇಕ ಯೋಜನೆಯಡಿಯಲ್ಲಿ, ಸಾರ್ವಜನಿಕರ ಹಣವನ್ನು ಯಥೇಚ್ಛವಾಗಿ ಬಳಕೆ ಮಾಡಿಕೊಂಡು ರಸ್ತೆ ಹಾಗೂ ಮಳೆನೀರು ಚರಂಡಿಗಳ ಕಾಮಗಾರಿಗಳನ್ನು ಅವೈಜ್ಞಾನಿಕವಾಗಿ ನಿರ್ವಹಿಸುತ್ತಿರುವುದಲ್ಲದೆ ಯಾವುದೇ ರೀತಿಯ ಗುಣಮಟ್ಟ ಹಾಗೂ ವಿನ್ಯಾಸ **(Design)** ದೊಂದಿಗೆ ನಿರ್ವಹಿಸುತ್ತಿರುವುದಿಲ್ಲ ಹಾಗೂ ಅನಾವಶ್ಯಕ ಕಾಮಗಾರಿಗಳನ್ನು ಕೈಗೊಂಡು, ಸಾರ್ವಜನಿಕರ ಹಣವನ್ನು ಪೋಲು ಮಾಡಲಾಗುತ್ತಿದೆ ಹಾಗೂ ಭ್ರಷ್ಟಾಚಾರವೂ ಸಹ ಅತೀ ಹೆಚ್ಚಾಗಿರುತ್ತದೆ ಎಂದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ಇತ್ತೀಚೆಗೆ ಸುರಿದ ಮಳೆಯಿಂದಾಗಿ ರಸ್ತೆಗಳು ಹಾಳಾಗಿರುವುದು ಕಂಡುಬಂದಿರುತ್ತದೆ. ಇದರಿಂದಾಗಿ ಸಾರ್ವಜನಿಕರಿಗೆ ದಿನನಿತ್ಯದ ಓಡಾಟಕ್ಕೆ ತೀವ್ರತರವಾಗಿ ತೊಂದರೆಯುಂಟಾಗಿರುವುದಲ್ಲದೇ ಅನಾನುಕೂಲತೆಯೂ ಸಹ ಉಂಟಾಗಿರುತ್ತದೆ.

ಸದರಿ ಪ್ರಮುಖ ರಸ್ತೆಗಳನ್ನು ದುರಸ್ಥಿಪಡಿಸುವಂತೆ, ಸ್ಥಳೀಯ ಸಾರ್ವಜನಿಕರು ಪ್ರತಿಭಟನೆಗಳನ್ನು ನಡೆಸಿದ್ದು, ಹಾಗೂ ಹಲವು ವರ್ಷಗಳಿಂದ ನ್ಯಾಯಾಲಯವು ಸಹ ರಸ್ತೆಗಳ ನಿರ್ಮಾಣ, ನಿರ್ವಹಣೆ ಕುರಿತು ಹಾಗೂ ರಸ್ತೆಗುಂಡಿಗಳನ್ನು ಮುಚ್ಚುವಂತೆ ಅನೇಕ ಆದೇಶಗಳನ್ನು ನೀಡಿದ್ದರು ಸಹ ಪಾಲಿಕೆ, ಇಲ್ಲಿಯವರೆಗೂ 8 ವಲಯದ ರಸ್ತೆಗಳ ನಿರ್ಮಾಣ ಹಾಗೂ ನಿರ್ವಹಣೆಗೆ ಯಾವುದೇ ಶಿಷ್ಟಾಚಾರ/ನೀತಿ ಮತ್ತು ರಸ್ತೆ ಇತಿಹಾಸ **(Road History)** ಮುಖಾಂತರ ಕ್ರಮ ಕೈಗೊಂಡಿರುವುದಿಲ್ಲ. ಇದರಿಂದ ಸಾರ್ವಜನಿಕ ಹಣ ದುರುಪಯೋಗವಾಗುತ್ತಿರುವ ವಿಚಾರಗಳನ್ನು ಸದನದಲ್ಲಿ ಪ್ರಸ್ತಾಪಿಸಲು ನಾನು ಈ ಸೂಚನಾ ಪತ್ರದ ಮೂಲಕ ಇಚ್ಛಿಸುತ್ತೇನೆ.

<u>ಉತ್ತರ:</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ "ನಗರೋತ್ಥಾನ ಯೋಜನೆಯಡಿ"ಯಲ್ಲಿ ಸಾರ್ವಜನಿಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದ್ದು, ಸದರಿ ಕಾಮಗಾರಿಗಳಿಗೆ ಅಂದಾಜು ಪಟ್ಟಿಗಳ ತಯಾರಿಕ ಹಂತದಲ್ಲಿ ಹಾಗೂ ಅನುಷ್ಠಾನದ ಸಂದರ್ಭದಲ್ಲಿ ಪ್ರಾಮಾಣಿಕ ಕಾರ್ಯಚರಣೆಯ ವಿಧಾನ (Standard Operating Procedure)ಅನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

ರಸ್ತೆಗೆ ಸಂಬಂಧಿಸಿದಂತೆ-IRC37, ವೈಟ್ ಟಾಪಿಂಗ್ ಕಾಮಗಾರಿಗೆ ಸಂಬಂಧಿಸಿದಂತೆ, IRC SP76 ಮತ್ತು ಡಾಂಬರೀಕರಣ ರಸ್ತೆಗಳ ಸಂಬಂಧಪಟ್ಟಂತೆ IRC 82 ಅನ್ನು ಬಳಸಿಕೊಂಡು ರಸ್ತೆ ನಿರ್ವಹಣೆಯ ತಾಂತ್ರಿಕತೆಯನ್ನು Indian Road Congress ಶಿಷ್ಟಾಚಾರ ಮತ್ತು ನಿಯಮಗಳಂತೆ ಹಾಗೂ MoRT&H ವಿಶಿಷ್ಟ ವಿವರಣೆ ಪಾಲಿಸಲಾಗುತ್ತಿದೆ. ಸದರಿ ಕಾಮಗಾರಿಗಳನ್ನು ವೈಜ್ಞಾನಿಕವಾಗಿ ಗುಣಮಟ್ಟವನ್ನು ಕಾಪಾಡಿಕೊಂಡು ಅನುಮೋದಿತ ವಿನ್ಯಾಸದಂತೆ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದ್ದು, ಸಾರ್ವಜನಿಕರ ಹಣ ಪೋಲಾಗದಂತೆ ರೂ.1.00 ಕೋಟಿಗಳಿಗೂ ಮೇಲ್ಪಟ್ಟ ಅಂದಾಜು ಪಟ್ಟಿಗಳಿಗೆ ಯೋಜನಾ ಅನುಷ್ಠಾನ ಸಮಾಲೋಚಕರನ್ನು ನೇಮಿಸಿಕೊಂಡು ಕಾಮಗಾರಿಗಳನ್ನು ಬಿ.ಬಿ.ಎಂ.ಪಿ.,ಯಿಂದ ಅನುಷ್ಠಾನಗೊಳಿಸಲಾಗುತ್ತಿದೆ.

ಇತ್ತೀಚೆಗೆ ಸುರಿದ ಅಕಾಲಿಕ ಮಳೆಯಿಂದ ಕೆಲವೊಂದು ರಸ್ತೆಗಳಲ್ಲಿ ಅದರಲ್ಲೂ ಬೆಂಗಳೂರಿನ ಕೆಲವು ಆಯ್ದ ಭಾಗಗಳಲ್ಲಿ ರಸ್ತೆಗಳು ಹಾಳಾಗಿರುತ್ತದೆ. ಆದರೆ, ಸದರಿ ರಸ್ತೆ ಗುಂಡಿಗಳನ್ನು ತ್ವರಿತವಾಗಿ ಮುಚ್ಚಲು ಕ್ರಮಕೈಗೊಳ್ಳಲಾಗಿರುತ್ತದೆ.

. . 2/-

**ದಿನಾಂಕ: 01-04-2022ರಿಂದ ರಸ್ತೆ ಗುಂಡಿಗಳನ್ನು ಮುಚ್ಚಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.**

1. ಪ್ರಸ್ತುತ ಇರುವ ಬಿಬಿಎಂಪಿಯ ಏಕೈಕ ಸ್ವಂತ ಡಾಂಬರು ಮಿಶ್ರಣ ಘಟಕದೊಂದಿಗೆ ಇನ್ನೂ ನಾಲ್ಕು ಪ್ರದೇಶಗಳಲ್ಲಿ ಬಾಡಿಗೆ ರೂಪದಲ್ಲಿ ಡಾಂಬರು ಮಿಶ್ರಣ ಘಟಕವನ್ನು ಪಡೆಯಲು ಉದ್ದೇಶಿಸಲಾಗಿದ್ದು, ದಿನಾಂಕ: 08.09.2022 ರಂದು 04 ಪ್ರದೇಶಗಳ ಡಾಂಬರು ಸರಬರಾಜುದಾರರಿಗೆ ಎಲ್.ಓ.ಎಅನ್ನು ಮತ್ತು Provisional Work order ಅನ್ನು ನೀಡಲಾಗಿರುತ್ತದೆ.
2. ಪ್ರಸ್ತುತ, ಮಳೆಗಾಲದಲ್ಲೂ ಗುಂಡಿ ಮುಚ್ಚಬಹುದಾದ Asphalt Cold Mix ತಯಾರಿಕ ತಂತ್ರಜ್ಞಾನದ ಹೆಚ್ಚುವರಿ ಅಡಕಗಳನ್ನು ಬಿಬಿಎಂಪಿಯ ಏಕೈಕ ಸ್ವಂತ ಡಾಂಬರು ಮಿಶ್ರಣ ಘಟಕಕ್ಕೆ ಜೋಡಣೆ ಮಾಡಲಾಗಿದ್ದು, ದಿನಾಂಕ:15.07.2022ರಂದು ಸದರಿ ಮೆ॥ Infra Source Equipment & materials LLP, Mumbai ಸಂಸ್ಥೆಗೆ ಎಲ್.ಓ.ಎ ನೀಡಲಾಗಿರುತ್ತದೆ.
3. ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆಯಡಿಯಲ್ಲಿ ಬೆಂಗಳೂರು ನಗರದ ಹಾಳಾದ ಮತ್ತು ಇತರೆ ನಿರ್ವಹಣೆಗೆ ಯೋಗ್ಯವಾದ ರಸ್ತೆಗಳನ್ನು ಡಾಂಬರೀಕರಣ ಮಾಡುವ ಕ್ರಮ ಕೈಗೊಳ್ಳಲಾಗಿರುತ್ತದೆ.
4. ವಾರ್ಡ್ ಮಟ್ಟದಲ್ಲಿ ಅಧ್ಯತೆಯ ಮೇಲೆ Liquid Emulsion Drum ಗಳನ್ನು ವಿತರಿಸಲಾಗಿದ್ದು, ತ್ವರಿತವಾಗಿ ಸ್ಥಳದಲ್ಲಿಯೇ ಡಾಂಬರು ಮಿಶ್ರಣ ತಯಾರಿಸಿ ಸೂಕ್ಷ್ಮ ಮತ್ತು ಅಪಘಾತ ಸರಹದ್ದುಗಳಲ್ಲಿ ರಸ್ತೆ ಗುಂಡಿ ಮುಚ್ಚಲು ಕ್ರಮಕೈಗೊಳ್ಳಲಾಗಿರುತ್ತದೆ.
5. ತುರ್ತು ಸಂದರ್ಭದಲ್ಲಿ ಪೈಥಾನ್ ಯಂತ್ರದ ಮೂಲಕ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮಕೈಗೊಳ್ಳಲಾಗಿರುತ್ತದೆ.

ಇದಲ್ಲದೇ, ಕೆಳಹಂತದ ಎಲ್ಲಾ ಅಭಿಯಂತರರುಗಳಿಗೆ Guidelines for Construction and Maintenance of Bangalore City roads ಎಂಬ ಕೈಪಿಡಿಯನ್ನು ಒದಗಿಸಲಾಗಿದ್ದು, ಪಾಲಿಕೆಯಿಂದ ಕೈಗೊಳ್ಳಲಾಗುವ ಕಾಮಗಾರಿಗಳ ಗುಣಮಟ್ಟವನ್ನು ಕಾಯ್ದುಕೊಳ್ಳಲು ಕ್ರಮವಹಿಸಲಾಗಿದೆ.

ಬಿ.ಬಿ.ಎಂ.ಪಿ.,ಯ ಎಲ್ಲಾ 8 ವಲಯದ ರಸ್ತೆಗಳ ನಿರ್ಮಾಣ ಹಾಗೂ ನಿರ್ವಹಣೆಗಾಗಿ ರಸ್ತೆ ಇತಿಹಾಸವನ್ನು ಕಡ್ಡಾಯವಾಗಿ ಬಳಸಿಕೊಳ್ಳಲಾಗಿದ್ದು, ಯಾವುದೇ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ರಸ್ತೆ ಇತಿಹಾಸ ಅಂತರ್ಜಾಲದಲ್ಲಿ ನಮೂದಿಸಿದ ನಂತರವೇ, ಬಿಲ್ಲು ಪಾವತಿಗೆ ಅವಕಾಶ ಕಲ್ಪಿಸಲಾಗಿರುವ ಹಿನ್ನಲೆಯಲ್ಲಿ, ಸಾರ್ವಜನಿಕರ ಹಣ ದುರುಪಯೋಗವಾಗುವುದನ್ನು ತಡೆಯಲು ಬಿಬಿಎಂಪಿ ಇತಿಯಿಂದ ಕ್ರಮಕೈಗೊಳ್ಳಲಾಗಿರುತ್ತದೆ.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

**ಸಂಖ್ಯೆ: ನಅಇ 723 ಎಂಎನ್‌ವೈ 2022 (ಇ)**